ಈಗ ಮನಗಾಣತಾಯಿದ್ದಾರೆ. ಈಗ ನಿಮಗೆ ನಾಟಕಕ್ಕೆ..., ಹಾಡಿಗೆ ಸಾಕಷ್ಟು ಸರಕು ಸಿಗುತ್ತೆ, ಪ್ಲೀಸ್ ಮರಳಿ ಬನ್ನಿ... ಕೈ! (ನಿಕ್ ನೇಮ್).

ಪರಲೋಕ ಧ್ವನಿ: ನನಗೂ ಬರಬೇಕೂ ಅನ್ನತ್ತೆ ಮಗೂ... ಇಲ್ಲಿ ಎಲ್ಲ ಅಚ್ಚುಕಟ್ಟು, ವ್ಯವಸ್ಥಿತ. ಎಲ್ಲೂ ಏನೂ ಐಬು ಕಾಣೋದೇ ಇಲ್ಲ. ನನ್ನ ಏಕಲವ್ಯ, ಕರ್ಣ ಅಂತಹ ಪೌರಾಣಿಕ ನಾಟಕಗಳ ಮಾತು ಬಿಟ್ಟರೆ ನನಗೂ ಬೋರೇ... ಆ ಬೋರೇಗೌಡ, ಕೋಳಿಕೆ ರಂಗ, ಪೋಲಿಕಿಟ್ಟಿ, ನಾಗತ್ತೆ, ಮಾಧು, ಇವರೆಲ್ಲ ಕಾಡ್ತಾರೆ; ಆಗ 'ತಾಳಿ ಕಟ್ಟೋಕೆ ಕೂಲೀನೇ?' ಬರೆದಿದ್ದೆ; ಈಗ 'ವಿಚ್ಛೇದನಕ್ಕೆ ಧನವೇ?', 'ಹಣ ಹಣ ಅಂತಾ ಬಾಯ್ಬಿಡೋ ಹೆಣಗಳೆ?', 'ಸ್ಟ್ರೆಸ್ಸು ಸ್ಟ್ರೇನು — ಹಾಳಾಯ್ತು ಬ್ರೈನು', 'ಡಾಲರ್ಗೋಸ್ಕರ ಕಾಲರ್ ಬಗ್ಗಸ್ಬೇಡ', 'ಗಣಕ ಗಣಕ — ಬದುಕು ಕ್ಷಣಿಕ', 'ಹಣ ಋಣ ಋಣ — ಗುಣ ಭಣ ಭಣ' — ಹೀಗೆ ಹತ್ತಾರು ನಾಟಕ ಬರೆದುಬಿಡಬಹುದಿತ್ತು!

ಲೋ ಧ್ವನಿ: ಇಲ್ಲಿ ಎರಡೂವರೆ ವರ್ಷ ಕೊರೊನಾ ಬಂದಾಗ ನಿಮ್ಮ 'ವೈದ್ಯನ ವ್ಯಾಧಿ' ನಾಟಕ ಬಹಳ ನೆನಪಾಯ್ತು; ಅಲ್ಲದೆ ನೀವು ಮಾಸ್ಕ್ ಬಗ್ಗೆ ಹೇಳಿದ್ದು — 'ಆಲ್ ಲೈಫ್ ಐಸ್ ಆ ಮಾಸ್ಕ್! ಮೆನ್ ಮೀಟ್ ಅಂಡ್ ಅಪಾರ್ಟ್!.. ಬಟ್, ಟೈಮ್ ನಾರ್ ಸ್ಪೇಸ್ ಮೇ ಚೇಂಜ್ ಟ್ರು ಹಾರ್ಟ್!' (ಎಲ್ಲ ಜೀವನವೂ ಮುಖವಾಡದಾಟ/ ಜನರೊಟ್ಟಿಗೂಡುವರು — ಬೇರೆಯಾಗುವರು/ ಕಾಲ ದೇಶಗಳ ಮಿತಿಯ ದಾಟಿ — ಸಹೃದಯರೆಂದೂ ಬದಲಾಗದಿಹರು!) ಮತ್ತೆ ನೀವು ಹೇಳ್ತಿದ್ದ ಆ ಇನ್ನೊಂದು ಪ್ರಸಂಗ: ...ಆತ: 'ದಾರಿ ಬಿಡ್ರಿ... ಮುಂದೆ ಹೋಗಬೇಕು ನಾನು...'. ಈತ: 'ನನಗಿಲ್ಲದ್ ಅವಸರ ನಿಮಗೇನ್ರೀ? ನಾನು ಈ ಊರಿನ ವೈದ್ಯ!'. 'ಹಾಗಾದರೆ ನೀವೇ ಮುಂದೆ ಹೋಗಿ... ಜಾಗ ಬಿಡ್ತೀನಿ. ನಾನು ಈ ಊರಿನ ಚಟ್ಟೋಪಾಧ್ಯಾಯ!'....

ಪರಲೋಕ ಧ್ವನಿ: ಅದಕ್ಕೇ 'ಸತ್ತವನ ಸಂತಾಪ' ನಾಟಕದಲ್ಲಿ ನಾನು ಹೇಳಿದ್ದು — 'ಸಫರಿಂಗ್ ಅನ್ನೋದು ಸರ್ವತ್ರ; ಸತ್ತಮೇಲೇನೇ ಅವುಗಳಿಂದ ವಿಮೋಚನೆ. ಕಣ್ಣೀರ ಕಡಲು ದಾಟೋಕೆ ನಗೆ ಹಾಯಿದೋಣಿನೇ ಸೂಕ್ತ! ಚಾರ್ಲಿ ಚಾಪ್ಲಿನ್ನು, ಆಸ್ಕರ್ ವೈಲ್ಡು, ಷಾ ಅವರೆಲ್ಲ ನಗೆ–ದಾರಿ ತಾನೇ ತೋರಿದ್ದು!

ಲೋ ಧ್ವನಿ: ನೀವು ಬಿಡಿ ಗಾಂಧೀಜಿ ಅಂಥವರನ್ನೇ ನಗಿಸಿದವ್ರು; 1927ರಲ್ಲಿ ನಂದಿ ಬೆಟ್ಟದಲ್ಲಿ ಗಾಂಧೀಜಿ ವಿಶ್ರಾಂತಿ ತಗೋತಿದ್ದಾಗ ಚೌಡಯ್ಯನವರು ಪಿಟೀಲು ನುಡಿಸೋಕೆ ಬಂದಾಗ, ಗಾಂಧೀಜಿ — 'ಹೂ ಐಸ್ ದಿಸ್ ಯಂಗ್ ಆರ್ಟಿಸ್ಟ್, ಕೈಲಾಸಂ?' ಎಂದಾಗ, ಮೆಲ್ಲಗೆ ಗಾಂಧೀಜಿ ಅವರ ಕಿವಿಯಲ್ಲಿ — 'ಬಾಪೂಜಿ, ಯು ಆರ್ ಎ **nonviolinist**; ಬಟ್ ಹಿ ಇಸ್ ಮಿ. ಚೌಡಯ್ಯ — ಎ ಪಕ್ಕಾ **violinist**!' ಅಂದವರಲ್ಲವೇ?! ಹಾಗೇ ಮೈಸೂರ್ ಮಹಾರಾಜಾ ಕಾಲೇಜಿನಲ್ಲಿ ನೀವು ನಡೆಸಿಕೊಟ್ಟ ಆ ಪ್ರಶ್ನೋತ್ತರ ಎಂದೂ ಮರೆಯಲಾಗದು. ಪುರಾಣ ಪಾತ್ರಗಳ ಬಗ್ಗೆ ಕೇಳ್ತಾ, ಒಬ್ಬ — 'ಭೀಮನ ಅಡ್ರೆಸ್ಸು ಹೇಳಿ ಸಾರ್?' ಅಂದಾಗ '**H.P.** ಭೀಮಸೇನ, **S/o** ಪಾಂಡು, ಹಸ್ತಿನಾಪುರ' ಅಂದ್ರಿ. 'ಭೀಮನ ಫೋನ್ ನಂಬರು?' ಅಂತ ಪ್ರಶ್ನೆ ಬಂದಾಗ, 882482.. ಅಂದದ್ದಲ್ಲದೇ ನೀವೇ ವಿವರಿಸಿದ್ರಿ, ನಿಮ್ದೇ ಹಾಸ್ಯದ ಸ್ಟೈಲಲ್ಲಿ 'ಡಬಲ್ ಏಟು — ಫೋರ್ ಏಟು!'

ಪರಲೋಕ ಧ್ವನಿ: ಕೈಲಾಸದಿಂದ ಭೂಲೋಕಕ್ಕೆ ಬರಬೇಕೂಂದ್ರೆ ತುಂಬಾ ಟ್ರಾಫಿಕ್ ಜಾಮ್! ಅಲ್ಲದೆ ವೀಸಾ/ಪಾಸ್‌ಪೋರ್ಟ್ ಕೂಡ ಕಷ್ಟ! ಅಲ್ಲಿ ಕೊಂಚ ಕೈ ಬಿಸಿ ಮಾಡಬಹುದು, ಇಲ್ಲಿ ಎಲ್ಲಾ ಸ್ಟ್ರಿಕ್ಟ್; ಅಲ್ಲದೆ ಬೆಂಗಳೂರೂ ಸಾಕಷ್ಟು ಚೇಂಜ್ ಆಗಿರಬೇಕು?

ಲೋ ಧ್ವನಿ: ಡೆಫಿನೇಟ್ಲಿ! ಟ್ರಾಫಿಕ್ ಜಾಮು ಟೆರ್ರಿಫಿಕ್ಕು! ಊರಷ್ಟೇ ಅಲ್ಲ, ಜನಾನೂ ಬದಲು; ಫ್ಲೈಓವರ್‌ಗಳು / ಅಂಡರ್ ಪಾಸ್ಗಳು; ನಿಮ್ಮ ಚಾಮರಾಜಪೇಟೆಯ ಮನೆ 'ವೈಟ್ ಹೌಸ್', ನಿಮ್ಮ ಕೊನೆ ದಿನ ಕಳೆದ ಬಸವನಗುಡಿಯ 'ಆವಂತಿ' ಮನೆ, ಕೆ.ವಿ. ಅಯ್ಯರ್ ವ್ಯಾಯಾಮ ಶಾಲೆ ಎಲ್ಲಾ ಬದಲು! ಊರೆಲ್ಲ ಅಪಾರ್ಟ್‌ಮೆಂಟು– ಮಾಲು! ಆದರೂ ನೀವು ಬರಬೇಕು. 'ನಮ್ ಕಂಪನಿ' ಬರೆದ್ ನಿಮ್ಮ್–ಕಂಪನಿ ಬೇಕು ನಮಗೀಗ!

ಪರಲೋಕ ಧ್ವನಿ: ನಾವೆಲ್ಲ ಬೊಂಬೆಗಳು; ನಮ್ಮ ಕೈಲೇನಿದೆ ಮಗೂ?!... ಆಡಿಸುವಾತ, ನಮ್ಮತ್ರಾತಾ ಮನಸು ಮಾಡ್ಬೇಕು. ಆದರೂ ಚಿಯರ್ ಅಪ್ ಮಗೂ... ಹೊನ್ನೆ? ಬಲ್ ಬಿರುದುಗಳೆ? ಹಾಲುಗಲ್ ವಿಗ್ರಹವೇ?/ ಕವಿ ಬಯಸನ್ ಇಂಥದೇ ಪ್ರತಿಫಲವೇ ಬೇಕು / ಹಿರಿಯರುಮ್, ಕಿರಿಯರುಮ್ ಕಿಲಕಿಲನೆ ನಕ್ಕೆರಡು ಕಣ್ಣ ಹನಿಯಿತ್ತರೆನಗದು ಅನಿತೆ ಸಾಕು... **some** ಡೇ; **some** ಮೊಮೆಂಟ್; **some**ವೇರ್; **some**ಬಡಿ; ಕೈಲಾ**some** –ಸ್ಮರಣೆ ನಡೀತಿದೆಯಲ್ಲ– ಜನ್ಮ ಸಾರ್ಥಕ!!



ಪ್ರತಿಕ್ರಿಯಿಸಿ: **feedback@sudha.co.in**